**ಅಸಲು ದಾವೆ ಸಂಖ್ಯೆ -250/2022**
**ಪಿ.ಡಬ್ಲ್ಯೂ- 1**

ದಿನಾಂಕ 16-09-2023 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆ: ಶ್ರೀ.ಪಿ.ಎಮ್.ವಿ ವಕೀಲರಿಂದ ವಾದಿ ಪರವಾಗಿ**

ನಾನು ಈ ದಾವೆಯಲ್ಲಿ ನಾನು ವಾದಿಯಾಗಿರುತ್ತೇನೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದನ್ನು ತಯಾರಿಸಲು ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಮತ್ತು ಸತ್ಯವಾಗಿರುತ್ತವೆ ಎಂದು ಈ ಮೂಲಕ ಪ್ರಮಾಣಿಸಿಕರಿಸುತ್ತೇನೆ.

ನಾನು ಈಗ ಸರ್ವೆ ನಂ.80/4, ಸರ್ವೆ ನಂ.80/5, ಸರ್ವೆ ನಂ.80/6, ಸರ್ವೆ ನಂ.75/2 ಬಿ, ಸರ್ವೆ ನಂ.75/4, ಸರ್ವೆ ನಂ.230/1, ಸರ್ವೆ ನಂ.230/2, ಸರ್ವೆ ನಂ.230/3, ಸರ್ವೆ ನಂ.230/4, ಸರ್ವೆ ನಂ.28/4, ಸರ್ವೆ ನಂ.29/4 ರ 2022-23 ರ ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-11 ಎಂದು, ಆಸ್ತಿ ಸಂಖ್ಯೆ 127, 72, 73 ಕ್ಕೆ ಸಂಬಂಧಿಸಿದಂತೆ ಪಿ.ಡಿ.ಓ ಮೆಳ್ಳಿಗೇರಿ ಗ್ರಾಮ ಪಂಚಾಯತಿರವರು ನೀಡಿದ ದೃಢೀಕರಣ ಪ್ರಮಾಣ ಪತ್ರಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-12 ರಿಂದ ನಿಪಿ-14 ಎಂದು, ನನ್ನ ತಂದೆ ಸಿದ್ದಪ್ಪ ಇವರ ಮರಣ ಪ್ರಮಾಣ ಪತ್ರ ಹಾಜರಪಡಿಸಿದ್ದು ನಿಪಿ-15 ಎಂದು, ನನ್ನ ತಾಯಿ ಸತ್ಯವ್ವ ಸರಬಿ ಇವರ ಮರಣ ಪ್ರಮಾಣ ಪತ್ರ ಹಾಜರಪಡಿಸಿದ್ದು ನಿಪಿ-16 ಎಂದು, ಗ್ರಾಮ ಲೆಕ್ಕಾಧಿಕಾರಿ ಮುಳ್ಳಿಗೇರಿರವರು ದೃಢೀಕರಿಸಿ ನೀಡಿದ ವಂಶಾವಳಿ ಹಾಜರಪಡಿಸಿದ್ದು ನಿಪಿ-17 ಎಂದು, ಸರ್ವೆ ನಂ.75/2 ಬಿ ಯ 1988-89 ರಿಂದ 1998-99 ರವರೆಗಿನ ಕೈಬರಹ ಪಹಣಿಯ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-18 ಎಂದು, ಮುಟೇಶನ ಎಂಟ್ರಿ ಸಂಖ್ಯೆ 1134, ಎಚ್.19/2013-14, ಎಚ್.27/2015-16, ಎಚ್.106/2016-17, ಎಚ್.4/2015-16, ಟಿ.507-2020-21, ಎಚ್.126/2020-21 ರ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-19 ರಿಂದ ನಿಪಿ-25 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಪ್ರಾಥಿಸಿಕೊಳ್ಳುತ್ತೇನೆ.

ಪ್ರತಿವಾದಿಯವರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ